**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ,**

**ಅರಕಲಗೂಡು.**

**ಸಿ.ಸಿ.ನಂ. 903/2022**

**ದಿನಾಂಕ: 26.12.2025**

ಪಿರ್ಯಾದುದಾರರು : ಶ್ರೀ.ಜಿ.ಟಿ. ಆನಂದ್

ವಿರುದ್ಧ

ಆರೋಪಿ : ಸುರೇಶ ನಾಯಕ.ಟಿ.ಆರ್.
ಬಿನ್ ರಾಮನಾಯಕ
ದೈಹಿಕ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ,
ಬೆಟ್ಟದ ತುಂಗ ಗ್ರಾಮ,
ಬೆಟ್ಟದಪುರ ಹೋಬಳಿ
ಪಿರಿಯಾಪಟ್ಟಣ ತಾಲ್ಲೂಕು
ಮೈಸೂರು ಜಿಲ್ಲೆ.

ವಾಸ: ತಂಬಡಹಳ್ಳಿ ಗ್ರಾಮ
ಬೆಟ್ಟದಪುರ ಹೋಬಳಿ
ಪಿರಿಯಾಪಟ್ಟದ ತಾಲ್ಲೂಕು,
ಮೈಸೂರು ಜಿಲ್ಲೆ.

ದಂಡ ಪ್ರಕ್ರಿಯಾ ಸಂಹಿತೆ ಕಲಂ **313** ರನ್ವಯ ಆರೋಪಿಯ ವಿಚಾರಣೆ:

ಪ್ರಶ್ನೆ-1: ನೀವು ಪಿರ್ಯಾದಿಯ ಪರ ಮಾಡಿದ ಸಾಕ್ಷಿದಾರರ ಹೇಳಿಕೆಯನ್ನು ಕೇಳಿ ತಿಳಿದುಕೊಂಡಿದ್ದೀರಾ ?

ಉತ್ತರ:

ಪ್ರಶ್ನೆ-2: ಪ್ರಾಸಾ-1 ಜಿ.ಟಿ. ಆನಂದ್ ಇವರು ತಮ್ಮ ಸಾಕ್ಷ್ಯದಲ್ಲಿ ತಾನು ಮತ್ತು ಆರೋಪಿ ಪರಿಚಯಸ್ಥರಾಗಿದ್ದು, ಪರಿಚಯದ ಆಧಾರದ ಮೇಲೆ ಆರೋಪಿಯು ತನ್ನ ದರದು ನಿಮಿತ್ತ ಅಂದರೆ ಗೃಹಕೃತ್ಯದ ಖರ್ಚಿಗಾಗಿ ಮತ್ತು ಇತರೆ ಕೈಸಾಲಗಳನ್ನು ತೀರಿಸುವ ಸಲುವಾಗಿ ತನ್ನಿಂದ ರೂ.5,00,000/- ಗಳನ್ನು ದಿನಾಂಕ: 23.04.2022 ರಂದು ಸಾಲವಾಗಿ ಪಡೆದು, ಸದರಿ ಸಾಲದ ಹಣವನ್ನು ಎರಡು ತಿಂಗಳ ಒಳಗಾಗಿ ಮರುಪಾವತಿ ಮಾಡುವುದಾಗಿ ಒಪ್ಪಿರುತ್ತೀರಿ ಎಂದು ತಮ್ಮ ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದರ ಬಗ್ಗೆ ನೀವೇನು ಹೇಳುವಿರಿ?

ಉತ್ತರ:

ಪ್ರಶ್ನೆ-3: ಇದೇ ಸಾಕ್ಷಿ ಮುಂದುವರೆದು, ಎರಡು ತಿಂಗಳ ನಂತರ ದಿ: 23.06.2022 ರಂದು ಆರೋಪಿಯನ್ನು ಭೇಟಿ ಮಾಡಿ ಸಾಲದ ಹಣವನ್ನು ಕೊಡುವಂತೆ ಕೇಳಿದಾಗ ಆರೋಪಿಯು ಸದರಿ ಸಾಲದ ಹಣಕ್ಕೆ ತನ್ನ ಖಾತೆ ಇರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಪಿರಿಯಾಪಟ್ಟಣ ಶಾಖೆಯ ಚೆಕ್

ನಂ.463621 ನ್ನು ದಿನಾಂಕಃ 23.06.2022 ಎಂದು ನಮೂದಿಸಿ, ಚೆಕ್ಕಿನ ದಿನಾಂಕದಂದು ಅಥವಾ ನಂತರದ ದಿನಗಳಲ್ಲಿ ಬ್ಯಾಂಕಿಗೆ ಹಾಜರುಪಡಿಸಿ ಹಣ ಪಡೆದುಕೊಳ್ಳುವಂತೆ ಹೇಳಿ ನೀಡಿರುತ್ತಾರೆಂದು ತಮ್ಮ ಸಾಕ್ಷ್ಯ ದಲ್ಲಿ ನುಡಿದಿರುತ್ತಾರೆ, ಈ ಬಗ್ಗೆ ನೀವೇನು ಹೇಳುವಿರಿ ?

ಉತ್ತರಃ

ಪ್ರಶ್ನೆ-4: ಇದೇ ಸಾಕ್ಷಿ ಮುಂದುವರಿದು ಸದರಿ ಚೆಕ್ಕನ್ನು ನಗಧೀಕರಣಕ್ಕಾಗಿ ದಿನಾಂಕಃ 23.06.2022 ರಂದು ಫಿರ್ಯಾದುದಾರರ ಖಾತೆ ಇರುವ ಕೆನರಾ ಬ್ಯಾಂಕ್, ರಾಮನಾಥಪುರ ಶಾಖೆಗೆ ಹಾಜರುಪಡಿಸಿದಾಗ, ಸದರಿ ಬ್ಯಾಂಕ್ ನವರು ನಿಮ್ಮ ಖಾತೆಯನ್ನು ಪರಿಶೀಲಿಸಿ, ನಿಮ್ಮ ಖಾತೆಯಲ್ಲಿ ಆರೋಪಿಯ ಖಾತೆಯು " Exceeds arrangement" ಎಂಬ ಕಾರಣದೊಂದಿಗೆ ವಾಪಸ್ಸು ಬಂದಿದ್ದು, ಸದರಿ ತಿರಸ್ಕೃತಗೊಂಡ ಚೆಕ್ ಮತ್ತು ಹಿಂಬರಹವನ್ನು ದಿನಾಂಕಃ 29.06.2022 ರಂದು ನೀಡಿರುತ್ತಾರೆಂದು ತಮ್ಮ ಸಾಕ್ಷ್ಯದಲ್ಲಿ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ ?

ಉತ್ತರಃ

ಪ್ರಶ್ನೆ-5. ಇದೇ ಸಾಕ್ಷಿ ಮುಂದುವರೆದು, ದಿನಾಂಕಃ 07.07.2022 ರಂದು ಪಿರ್ಯಾದುದಾರರು ತನ್ನ ವಕೀಲರ ಮೂಲಕ ನೊಂದಾಯಿತ ಅಂಚೆ ಮೂಲಕ ನೋಟೀಸನ್ನು ನಿಪಿ-3 ರಂತೆ ನಿಮಗೆ ಜಾರಿಗೊಳಿಸಿದ್ದು, ಸದರಿ ನೋಟೀಸು ದಿನಾಂಕಃ 20.07.2022 ರಂದು ನಿಮಗೆ ಖುದ್ದು ಜಾರಿಯಾಗಿದ್ದರೂ ಸಹಾ ನೀವು ಸದರಿ ನೋಟೀಸಿಗೆ ಮರುತ್ತರವನ್ನು ನೀಡಿರುವುದಿಲ್ಲ ಮತ್ತು ತನಗೆ ನೀಡಬೇಕಾಗಿರುವ ಸಾಲದ ಹಣವನ್ನು ಮರುಪಾವತಿ ಮಾಡಿರುವುದಿಲ್ಲವೆಂದು ತಮ್ಮ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುವಿರಿ ?

ಉತ್ತರಃ

ಪ್ರಶ್ನೆ-6: ಈ ಬಗ್ಗೆ ನಿಮಗೆ ಹೆಚ್ಚಿಗೆ ಏನಾದರೂ ಹೇಳುವುದಿದೆಯೇ?

ಉತ್ತರಃ

ಪ್ರಶ್ನೆ-7: ನಿಮಗೆ ಪ್ರತಿರಕ್ಷೆ ಇದೆಯೇ ?

ಉತ್ತರಃ

(ಈ 313 ಹೇಳಿಕೆಯ ಅಂಶಗಳನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ತಿದ್ದುಪಡಿ ಮಾಡಿದ ನಂತರ ಸದರಿ 313 ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಗಿದೆ ಎಂದು ದೃಢೀಕರಿಸುತ್ತೇನೆ. ಈ ಹೊತ್ತು ದಿನಾಂಕ 26 ನೇ ಡಿಸೆಂಬರ್ 2025)

**(ಶ್ರೀ ರಘು.ಎಂ)**
1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ, ನ್ಯಾಯಾಧೀಶರು, ಅರಕಲಗೂಡು.